ಟಿ ಕೆ ರಾಮರಾವ್ ಕನ್ನಡದ ಇನ್ನೊಬ್ಬ ಮೇರು ಕಾದಂಬರಿಕಾರ. 'ಬಂಗಾರದ ಮನುಷ್ಯ'ದಂತಹ ಪತ್ತೇದಾರಿಕೆಯಿಂದ ಗಾವುದ ದೂರವಿದ್ದ ಅತ್ಯುತ್ತಮ ಕಾದಂಬರಿಗಳನ್ನು ಬರೆದ ದಿ. ಟಿ.ಕೆ.ರಾಮರಾವ್, ಹಲವಾರು ರಹಸ್ಯಭರಿತ ಪತ್ತೇದಾರಿ ಥ್ರಿಲ್ಲರ್‌ಗಳನ್ನೂ ಬರೆದರು. ತಮ್ಮದೇ ವಿಶಿಷ್ಟ ಭಾಷಾ ಶೈಲಿಯನ್ನು ಕರಗತ ಮಾಡಿಕೊಂಡಿದ್ದ ಟಿ.ಕೆ.ರಾಮರಾವ್, ಕನ್ನಡದ ಸರ್ವಕಾಲಿಕ ಬೆಸ್ಟ್ ಸೆಲ್ಲಿಂಗ್ ಲೇಖಕರಲ್ಲಿ ಒಬ್ಬರು.

ಮ.ರಾಮಮೂರ್ತಿ, ಎನ್.ನರಸಿಂಹಯ್ಯನವರ 60ರ ದಶಕದ ಕಥೆಗಳಿಗೆ ಹೋಲಿಸಿದರೆ, ರಾಮರಾವ್ ಬರೆದ ಕಥೆಗಳಲ್ಲಿ ಕಾಲಕ್ಕೆ ತಕ್ಕಂತೆ ಬದಲಾದ ಸಾಮಾಜಿಕ ಬದಲಾವಣೆಗಳು ಮತ್ತು ವೈಜ್ಞಾನಿಕ ಆವಿಷ್ಕಾರಗಳೂ ತಮ್ಮದೇ ಆದ ಛಾಪು ಮೂಡಿಸಿ ಅಪಾರ ಕನ್ನಡಿಗ ಓದುಗರನ್ನು ಸೃಷ್ಟಿಸಿದ್ದು ಸುಳ್ಳಲ್ಲ. ಅವರ ಜನಪ್ರಿಯ ಕಾದಂಬರಿಗಳಾದ ವರ್ಣಚಕ್ರ, ಮರಳು ಸರಪಣಿ, ಮಣ್ಣಿನ ದೋಣಿ, ಲಂಗರು, ಕೆಂಪು ಮಣ್ಣು, ಪಯಣದ ಕೊನೆ , ಹಿಮಪಾತ ಮುಂತಾದವು ಮೊದಲು ಧಾರಾವಾಹಿಯಾಗಿ ಬಂದವು.


ವಿಜಯ ಸಾಸನೂರ

ಬಳಿಕ ಸಿನಿಮಾಗಳೂ ಆಗಿ ಮಿಂಚಿದವು. ರಾಯರ ಇತರ ಜನಪ್ರಿಯ ಕತೆಗಳೆಂದರೆ ಡೊಂಕು ಮರ, ದಿಬ್ಬದ ಬಂಗಲೆ, ಬಣ್ಣದ ಹುಳು, ಸರ್ಪದಂಡೆ, ಸೀಳು ನಕ್ಷತ್ರ, ಇತ್ಯಾದಿ.

ವಿಜಯ ಸಾಸನೂರರ ಐ.ಪಿ.ಎಸ್. ಅಧಿಕಾರಿಯಾಗಿ ನಿವೃತ್ತರಾದವರು. ತಮ್ಮ ವೃತ್ತಿ ಜೀವನದ ಅನುಭವಗಳ ಸಾರವನ್ನು ಭಟ್ಟಿಯಿಳಿಸಿ 'ವಿಗ್ರಹ ಚೋರರು' ಎಂಬ ಕಾದಂಬರಿಯಿಂದ ಆರಂಭಿಸಿದರು. ನಂತರ ಅಜಿತ್, ಸಾಮ್ರಾಟ್, ಗೀತಸಂಗೀತ, ಯುದ್ಧ, ಮಾಯಾ, ಜ್ವಾಲಾಮುಖಿ, ಅಪರಂಜಿ, ಶಿವತಾಂಡವ, ಇಂದ್ರಜಾಲ ಮತ್ತು ನಿರಂಜನ ಇತ್ಯಾದಿ ಒಂದಾದರ ಮೇಲೆ ಒಂದು ರಹಸ್ಯಮಯ ಕತೆಗಳು ಸೇರಿದವು. ಧ್ರುವತಾರೆ, ಜ್ವಾಲಾಮುಖಿ, ಶಬ್ದವೇಧಿ, ಸವ್ಯಸಾಚಿ ಮೊದಲಾದ ಇವರ ಪ್ರಮುಖ ಕೃತಿಗಳು ಚಲನಚಿತ್ರವಾಗಿಯೂ ಜನಪ್ರಿಯವಾದವು.


ಸುದರ್ಶನ ದೇಸಾಯಿ

ಎಚ್ ಕೆ ಅನಂತರಾವ್ ಅವರ 'ಅಂತ' ಕಾದಂಬರಿಯು 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಜನಪ್ರಿಯತೆಯ ಶಿಖರ ತಲುಪಿತು. ಮುಂದೆ ಚಲನಚಿತ್ರವೂ ಆಗಿ ಕನ್ನಡ ಸಿನಿಮಾರಂಗದಲ್ಲಿ ಹೊಸ ರೀತಿಯ ಸಿನಿಮಾಗಳಿಗೆ ನಾಂದಿ ಹಾಡಿತು. ಜಾಲ, ಶೋಧನೆ, ಸೆಳೆತ, ಅಂತ, ಅಂಜಿಕೆ, ಓಟ, ಜನಜನಕ , ಸುಶೀಲ್, ಶಾಂತಿ ಶೋಧ, ಅಂತ–2, ಅಪೂರ್ವ, ಕಿರಾತಕರು, ಅನಾವರಣ, ಸಾವಿನ ಸೀಳು,ಮನೋಮಯ, ಡಾಟ್ಕಾಮ್, ಮತ್ತೊಂದು ಆಯಾಮ, ಕೆಂಪು ಹಿಮ ಮುಂತಾದವು ಇವರ ಜನಪ್ರಿಯ ಕಾದಂಬರಿಗಳು. ಒಂದು ಕಾಲದಲ್ಲಿ ಕನ್ನಡ ಸಿನಿಮಾದ ನಿರ್ಮಾಪಕರು ಇವರ ಮನೆಮುಂದೆ ಕ್ಯೂ ನಿಂತು, ವಿಮಾನದಲ್ಲಿ ಇವರನ್ನು ಓಡಾಡಿಸಿದ್ದು ಇತಿಹಾಸದಲ್ಲಿ ದಾಖಲಾಗಿದೆ.


ಟಿ.ಕೆ. ರಾಮರಾವ್

ಇತರ ಕತೆಗಾರರು: ಬಿ ಎಚ್. ಸಂಜೀವ ಮೂರ್ತಿ, ಬಿ ವಿ ಅನಂತರಾಂ, ಕೌಂಡಿನ್ಯ, ಕ್ಯಾತ್ಸಂದ್ರ ಚಂದ್ರಶೇಖರ್, ಆರ್ ವಿ ಕಟ್ಟೀಮನಿ, ಕುಂದಾನಿ ಸತ್ಯನ್, ಬಿ.ಕೆ. ಸುಂದರರಾಜು, ಎಂ. ಜೀವನ್, ಮಾಭೀಶೇ, ಎನ್ ಗುಂಡಾಶಾಸ್ತ್ರಿ, ಪಿ. ರಾಜು, ಕಾಕೋಳು ರಾಮಯ್ಯ, ಪುಲಕೇಶಿ, ಸಾಸ್ನಾಮೂರ್ತಿ, ಚೈತನ್ಯ (ಮಾಧವ ಕುಲಕರ್ಣಿ), ಎಚ್. ಜಿ. ಶಿವಶಂಕರ, ಸದಾನಂದ, ಸಾ. ಕೃ. ಪ್ರಕಾಶ್, ಶಿವಾಜಿ ರಾವ್ ಮುಂತಾಗಿ ಕನ್ನಡ ಪತ್ತೇದಾರಿ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು ಪಟ್ಟಿ ಸಾಕಷ್ಟು ಉದ್ದವಿದೆ.

ಇಬ್ಬರು ಮಹಿಳಾ ಕಾದಂಬರಿಕಾರರೂ ಕೂಡಾ ಪತ್ತೇದಾರಿ ಕ್ಷೇತ್ರದಲ್ಲಿ ಹೆಸರು ಮಾಡಿರುವುದು ವಿಶೇಷ. ಪುರುಷರ ಏಕಸ್ವಾಮ್ಯವಾಗಿದ್ದ ಈ ಕ್ಷೇತ್ರದಲ್ಲಿ ಸರಿತಾ ಜ್ಞಾನಾನಂದ ಮತ್ತು ಕೆ ಆರ್ ಪದ್ಮಜೆ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದವರು.

ತೆಲುಗಿನಲ್ಲಿ ಖ್ಯಾತಿ ಹೊಂದಿದ ಯಂಡಮೂರಿ ವೀರೇಂದ್ರನಾಥ್ ಅವರ ಕನ್ನಡಕ್ಕೆ ಅನುವಾದಗೊಂಡು ಇನ್ನೊಂದು ರೀತಿಯಲ್ಲಿ ದಾಖಲೆ ನಿರ್ಮಿಸಿದವು. ಹೊಸ ಕಾಲದ ಥ್ರಿಲ್ಲರ್‌ಗಳು ಕನ್ನಡಿಗರ ಮನಸ್ಸನ್ನೂ ಸೆಳೆದದ್ದು ಸುಳ್ಳಲ್ಲ. ಒಂದು ಕಾಲದಲ್ಲಿ ಕನ್ನಡ ವಾರಪತ್ರಿಕೆಗಳಲ್ಲಿ ಯಂಡಮೂರಿ ಕೃತಿಗಳು ಅನಿವಾರ್ಯ ಎನ್ನುವ ವಾತಾವರಣವೂ ಮೂಡಿತು. ಇವರ ಕಾದಂಬರಿಗಳನ್ನು ಕನ್ನಡಕ್ಕೆ ವಂಶಿ, ಸರಿತಾ ಜ್ಞಾನಾನಂದ, ರಾಜಾ ಚೆಂಡೂರ್ ಮುಂತಾದವರು ಅನುವಾದಿಸಿದರು. ಬಹಳ ಶೀಘ್ರದಲ್ಲೇ ವಿದ್ಯಾವಂತ ಓದುಗರ ಜನಮನವನ್ನು ಗೆದ್ದು ಎಲ್ಲರೂ ಮುಗಿಬಿದ್ದು ಖರೀದಿಸಿದ ಇವರ ಕೃತಿಗಳಲ್ಲಿ ಮರಣಮೃದಂಗ ಮುಖ್ಯವಾದದ್ದು. ಕನ್ನಡದ ಮುಖ್ಯವಾಹಿನಿಯ ಲೇಖಕರಲ್ಲಿ ಎಂ.ಕೆ. ಇಂದಿರಾರವರ 'ನೂರೊಂದು ಬಾಗಿಲು' ಕೂಡಾ ಪತ್ತೇದಾರಿ ಕಾದಂಬರಿಗಳ ಪಟ್ಟಿಗೆ ಅಪರೂಪದ ಸೇರ್ಪಡೆಯಾಗಿದೆ.

ಕನ್ನಡ ಪತ್ತೇದಾರಿ ಪುಸ್ತಕಗಳಿಗೆ ಆ ಬಳಿಕ ಓದುಗರ ಸಂಖ್ಯೆ ಯಾಕೆ ಕಡಿಮೆಯಾಯಿತು ಎನ್ನುವುದನ್ನು ಕಂಡು ಹಿಡಿಯಲು ಯಾವ ಪತ್ತೇದಾರನ ಅಗತ್ಯವೂ ಇಲ್ಲ! ಮುಖ್ಯವಾಗಿ ಈಗಿನ ಪೀಳಿಗೆಯನ್ನು ಓದಿನ ಜಗತ್ತಿಗೆ ಆಕರ್ಷಿಸುವ ಜನಪ್ರಿಯ ಸಾಹಿತ್ಯದ ಮಾದರಿಯ ಕೊರತೆಯೇ ಇದಕ್ಕೆ ಕಾರಣ. ಲೇಖಕರಲ್ಲಿಯೂ ಸಾಕಷ್ಟು ಬೌದ್ಧಿಕ ಪ್ರೌಢಿಮೆಯ ಅಭಾವ ಮತ್ತು ಇಂದಿನ ಬದಲಾದ ಸಾಮಾಜಿಕ ಪರಿಸ್ಥಿತಿಗೆ ಹೊಂದುವಂತಹ ಪತ್ತೇದಾರಿ ಕತೆಗಳ ಕೊರತೆಯೂ ಕಾಡುತ್ತಿದೆ.

ಇಂಗ್ಲಿಷ್ ಸಾಹಿತ್ಯದಲ್ಲಿ ಅಗಾಥಾ ಕ್ರಿಸ್ಟೀ, ಆರ್ಥರ್ ಕಾನನ್ ಡಾಯ್ಲ್, ರೇಮಂಡ್ ಚಾಂಡ್ಲರ್, ರಾಸ್ ಮ್ಯಾಕ್ಡೊನಾಲ್ಡ್ , ಜೇಮ್ಸ್ ಹ್ಯಾಡ್ಲಿ ಚೇಸ್ ರಂತಹ ಅತಿರಥ ಮಹಾರಥರು ಪತ್ತೇದಾರಿ ಮತ್ತು ಗೂಢಚಾರಿ ಕತೆಗಳ ದೊಡ್ಡ ಸಂಸ್ಕೃತಿಯನ್ನೇ ಹುಟ್ಟುಹಾಕಿದರು. ಇಂದಿಗೂ ಇಂಗ್ಲಿಷ್‌ನಲ್ಲಿ ಥ್ರಿಲ್ಲರ್ ಕಾದಂಬರಿಗಳು ಅಂತರರಾಷ್ಟ್ರೀಯ ಬೆಸ್ಟ್ ಸೆಲ್ಲರ್ ಪಟ್ಟಿಗಳಲ್ಲಿ ಮುಂಚೂಣಿಯಲ್ಲಿವೆ.

ಕನ್ನಡದಲ್ಲಿ ಪುಸ್ತಕ ಖರೀದಿಸುವವರ ಸಂಖ್ಯೆ ಕಡಿಮೆಯೇನಾಗಿಲ್ಲ. ಆದರೆ ಪುಸ್ತಕಗಳನ್ನು ಓದುವವರ ಸಂಖ್ಯೆ ಕಡಿಮೆಯಾಗಿದೆ ಎಂಬ ಅನುಮಾನ ನನ್ನದು. ಓದುಗ ವರ್ಗವನ್ನು ಮತ್ತೆ ಆಕರ್ಷಿಸಲು ಪತ್ತೇದಾರಿ ಸಾಹಿತ್ಯವನ್ನೇ ಬಳಸಬಹುದು. ಹೆಚ್ಚು ಮಾಹಿತಿ, ಅಪರೂಪದ ವಿವರಗಳು, ಜತೆಗೆ ಪುಸ್ತಕದ ಆಕರ್ಷಕ ವಿನ್ಯಾಸ ಹಾಗೂ ರಂಜನೆಯ ಕಥಾಗುಣಗಳಿದ್ದರೆ ಕನ್ನಡಿಗರು ಮತ್ತೆ ಪತ್ತೇದಾರಿ ಸಾಹಿತ್ಯದತ್ತ ಮುಗಿಬೀಳಬಹುದು.